
ಅಥವಾ ಯಾರ ಮೆಚ್ಚಿಗೆ ಇವರಿಗೆ ಬೇಕಾಗಿತ್ತೋ ಅವರು ಮೆಚ್ಚದಿದ್ದರೆ ತಳಮಳವೋ ತಳಮಳ. ಮರುದಿನ ತಮ್ಮ ಗ್ವಾಡಿ ಮ್ಯಾಲ ಮತ್ತೊಂದು ಸ್ಟೇಟಸ್ ಅಪ್ ಡೇಟ್ ಮಾಡೇಬಿಡ್ತಾರ, ''ಏನೊಪಾ, ನೆನ್ನೆ ನಾನ್ ಶೇರ್ ಮಾಡಿದ್ದು ಯಾರಿಗಾದರೂ ನೋವಾಗಿದ್ದರೆ ಕ್ಷಮಿಸಿ'' ಅದಕ್ಕ ಅವರ ಡೈ ಹಾರ್ಡ್ ಬೀಸಣಿಕೆಗಳು ಕೆಲಮಂದಿ "ಯಾಕ್ರಿ ಏನಾತು, ಯೇನಾತು?" ಅಂತ ಪ್ರಶ್ನಿ ಕೇಳತಾರ. ಆಗ ಈ ಹೊಗಳಿಕಾಕಾಂಕ್ಷಿಗಳು" ಏನೋಪಾ, ಯಾರೂ ಲೈಕೇ ಮಾಡ್ಲಿಲ್ಲಲ್ಲಾ... ಅದಿಕ್ಕೇ ಬೇಜಾರಾಯ್ತೇನೋ ಅನ್ನಿಸ್ತು." ಎಲಾ ಇವನ!! ಇಷ್ಟಾ ಆದರ ಇಷ್ಟಮುದ್ರಿ ವತ್ತತಾರ.

ಇನ್ನ ಕೆಲ ಮಂದಿ ಇರತಾರ. ಇವರು ತಮ್ಮ ವೈಯಕ್ತಿಕ ಜೀವನದಾಗ ಯಾರದೋ ಜೋಡಿ ಝಗಳಾಡಿರತಾರ. ಆ ಝಗಳಾ ಇಲ್ಲೆ ಮುಂದುವರೀತದ. ಒಂದ ಸಮನ ಅಂಥ ಸಂದೇಶಗಳನ್ನ ಅದು ಮುಟ್ಟ ಬೇಕಾದವರಿಗೆ ಮುಟ್ಟೇ ಮುಟ್ಟತದ ಅನ್ನೋ ಛಲದಿಂದ ಹಾಕೇ ಹಾಕತಿರತಾರ. ಅದು ಮುಟ್ಟಬೇಕಾದವರನ್ನ ಬಿಟ್ಟು ಬ್ಯಾರೇ ಅಷ್ಟೂ ಮಂದಿಯನ್ನ ಮುಟ್ಟತದ. ಇನ್ನ ಭಾಳ ಮಂದಿ ಬರಿಯೋ ಗಿರಿಯೋ ಗೋಜಿಗೆ ಹೋಗುದುಲ್ಲ. ಓನ್ಲಿ ಫೋಟೊಸ್! ತಾವೇನು ಮಾಡಿದರೋ ಅದರದೊಂದು ಫೋಟೊ ದಿನಾ ಎಫ್ ಬಿ ಮ್ಯಾಲೆ ರಾರಾಜಿಸಲೇ ಬೇಕು. ಕೆಲ ಮಹಾನುಭಾವರು ದಿನಾ ಮುಂಝಾಲೆ ತಾವೆದ್ದ ಕೂಡಲೆ ಕ್ಯಾಮಾರಿಲೆ ಒಂದು ಸ್ವಂತಿಯನ್ನ ತಕ್ಕೊಂಡು ಶುಭ ಮುಂಜಾನೆ, ಮಧ್ಯಾಹ್ನ ಊಟ ಮಾಡಿ ಶುಭ ಮಧ್ಯಾಹ್ನ, ರಾತ್ರಿ ನಿದ್ದಿಗಣ್ಣಾಗ ಇನ್ನೊಂದು ಸ್ವಂತೀ ತೊಗೊಂಡು ಶುಭರಾತ್ರಿ ಹೇಳಬೇಕರಿ. ಇಂಥವನ್ನ ನೋಡಿ ನೋಡಿ ಇವರ ವಿಶ್ ಬರಲಿಲ್ಲ ಅಂದರ... ಏನಪಾ ಈ ಮನಿಷಾ ಐತ್ಯೋ, ಹೋತೋ ಅನ್ನೋ ಅನುಮಾನ ಬರತದ.




ನಮ್ಮ ದೇಶದಾಗೇನು ಬರೋ ಹಬ್ಬಕ್ಕ, ಮನೀಗೆ ಬರೋ ಅತಿಥಿ ಗಣಕ್ಕ ಬರವಿಲ್ಲ ಖರೆ, ಅದರ ಈತ್ತಿತ್ತಲಾಗ ಈ ಹಬ್ಬಗೋಳನ್ನ ಫೇಸ್‌ಬುಕ್ಕಿನ ಸಲುವಾಗಿಯೇ ಮಾಡ್ತಾರೇನೋ, ಮೊ.ಹೊ ದ್ವಳಗ ಫೋಟೊ ಹಾಕೋ ಸಲುವಾಗಿಯೇ ಮನಿಗೆ ಮಂದಿನ್ನ ಕರೀತಾರೇನೋ ಎನ್ನೋ ಸಂಶಯ ಬರತದ. ಎಲ್ಲ ಹಬ್ಬಗಳ ಸಡಗರಕ್ಕ ಈಗೀಗ ಇನ್ನೊಂದು ಸಡಗರ. ತಾವು ಪ್ರಾಂತವಾರು ಆ ಹಬ್ಬವನ್ನು ಆಚರಿಸಿರೋದರ ಕುರಿತಾಗಿ ಫೋಟೊ ಸಹಿತಾದ ಸಾಕ್ಷ್ಯವನ್ನು ತಮಗೆ ಆಪ್ತರಾದವರೊಡನೆಯಷ್ಟೇ ಅಲ್ಲದ ಮೊ.ಹೋ ಗೆಳೆಯ ಗೆಳತಿಯರೊಡನೆಯೂ ಹಂಚಿಗೊಳ್ಳಲಿಕ್ಕೇಬೇಕು. ನನ್ನ ಸ್ನೇಹಿತರಿದ್ದಾರ. ಅವರೆಲ್ಲೆಲ್ಲಿ ಹೋಗಿದ್ದರು, ಯಾರ ಮನಿಗೆ, ಯಾಕ, ಎಷ್ಟೊತ್ತು ಎನ್ನುವ ಅಷ್ಟೂ ವಿವರ ಈ ಮೊ.ಹೊ ಮ್ಯಾಲೆ ಫೋಟೊ ಸಹಿತ ಬರಲೇಬೇಕು. ಇದೆಲ್ಲಿಯ ಕರ್ಮ ನೋಡೋರದು. ಯಾರೋ, ಯಾರದೋ ಮನಿಗೆ ಯಾವಾಗೋ, ಯದಕ್ಕೋ ಹೋಗಿ ಏನೋ ಊಟ ಮಾಡಿದ್ದನ್ನ ನಾವ್ಯಾಕ ನೋಡಬೇಕು, ನೋಡಿ ಮೆಚ್ಚಬೇಕು? ಆ ನನ್ನ ಸ್ನೇಹಿತರ ಹತ್ತಿರ ಇರುವ ಅಷ್ಟೂ ಸೀರಿ ಒಡವೆಗಳು ಕಳ್ಳರ ಕಣ್ಣಿಗೆ ಬೀಳದಿದ್ದರ ಸಾಕು. ಅಷ್ಟ್ ಪರಿ ದಿಖಾವೆ ಬೇಕೇನಪಾ ಮಹಾರಾಯ? ನನ್ನ ಸ್ನೇಹಿತರೊಬ್ಬರು ಏಂಥಾ ಚೊಲೋ ಹಾಡುಗಾರರು! ಹಾಡಾ ಹಾಡಿ